SATYAVADI Founded 1917 Regd. No. M 1299



(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 176] ಶನಿವಾರ 30—3—46 [ಬಿಡಿ ಪ್ರತಿ 3 ಪೈ

ಅಮೇರಿಕಾಕ್ಕೆ ರೇಪನ್ ಬೇಡವೇ !

ವಿವಿಧ ವರ್ತಮಾನ

ಷಾಂಘಾಯಿನಲ್ಲಿದ್ದ 150 ಮಿಲಿಯ ರತ್ನಗಳ ಆಸ್ತಿಯನ್ನು ಮಿತ್ರರು ವಶ ಪಡಿಸಿಕೊಂಡಿರುವರೆಂದು ಹೇಳಲಾಗಿದೆ.

ಡೆಕ್ಕನ್ ಟೈಂಸ್ ಎಂಬ ಪತ್ರಿಕೆಯ ಪತ್ರದಲ್ಲಿ ತ್ಯಾವಣಕೂರ ವಿರುದ್ಧ ಲೇಖನಗಳಿರುವುದರಿಂದ ತ್ಯಾವಣಕೂರು ಸರಕಾರದವರು ಅದಕ್ಕೆ ಬಂದಿ ಮಾಡಿದ್ದಾರೆ

ನ್ಯೂಯಾರ್ಕ್ ಮಾ 28— ಈ ದಿವಸದ ಭದ್ರತಾ ಸಮಿತಿಯ ರಹಸ್ಯ ಅಧಿವೇಶನಕ್ಕೆ ರಷ್ಯಾ ಪ್ರತಿನಿಧಿ ಹಾಜರಿಲ್ಲ. ರಷ್ಯಾ ಸಮಿತಿಯ ಸದಸ್ಯತ್ವವನ್ನು ತ್ಯಜಿಸಲಾರದೆಂದು ತಾವು ಸಂಬಿರುವುದಾಗಿ ಪೈ || ಟ್ರೂಮನ್ನರು ಹೇಳಿದಾರೆ

ಹಳೇ ದಿಲ್ಲಿಯಲ್ಲಿ ಗೌಳಿಗರು ಹಾಗೂ ಹಲವಾಯುಗಳಲ್ಲಿ ದರದ ಬಗ್ಗೆ ವಾದವಾಗಿ ಎಲ್ಲ ಗದಳಿಗರು ಸಂಪು ಮಾಡಿದರು. ಅನೇಕ ಚಹಾ ಅಂಗಡಿಗಳಲ್ಲಿ ಕೆಫೆಗಳಲ್ಲಿ ಚಹಾ ಸಿಗಲಿಲ್ಲ. ಸಣ್ಣ ಹುಡುಗರಿಗು ಹಾಲು ಸಿಗಲಿಲ್ಲ.

ಹಿಂದೂಸ್ಥಾನದಲ್ಲಿ ಅರಿವೆ ಕೊರತೆಯಾಗುವುದಕ್ಕೆ ಅಧಿಕಾರಿಗಳ ಲೋಪದೋಷಗಳೇ ಕಾರಣವೆಂದು ಶ್ರೀ ಮುರಾರಾಜಿಯವರು ಮುಂಬಯಿಯಲ್ಲಿ ಅರಿವೆ ನೂಲು ವ್ಯಾಪಾರಿಗಳ ಸಂಘದ ಎರಡನೇ ಅಧಿವೇಶನದಲ್ಲಿ ಅಧ್ಯಕ್ಷ ಸ್ಥಾನ ವಹಿಸಿದಾಗ ನುಡಿದರು.

ಮದರಾಸು ಮಾ 26 — ಕೊಡಯಿಕನಲ್ ರಸ್ತೆಯಲ್ಲಿ ಒಂದು ಭಯಂಕರವಾದ ಭಂಡೆಯನ್ನು ತಪ್ಪಿಸಿಕೊಳ್ಳಲು 47000 ರೂ. ವೆಚ್ಚದಿಂದ ಹೊಸ ರಸ್ತೆಯೊಂದನ್ನು ತಯಾರಿಸಲು ಸರಕಾರದ ಆಲೋಚನೆಯಲ್ಲಿದೆ.

ಬೆಂಗಳೂರು ಮಾ 29—ಮೈಸೂರು ಸರಕಾರದವರು ಚಿನ್ನದ ಗಣಿಯವರಿಗೆ ಪರಿಹಾರ ಹೊಡುವುದರಬಗ್ಗೆ ನೇಮಿಸಲಾಗಿದ್ದ ಸಮಿತಿಯವರು 36 ಲಕ್ಷ ರೂ. ವಾಪಸ್ಸು ಕೊಡಲು ಶಿಫಾರಸು ಮಾಡಿದಾರೆ.

ಮದರಾಸು ಮಾ 29— ಮದರಾಸಿನಲ್ಲಿ ಫೆಬ್ರವರಿ 25 ರಲ್ಲಿ ಒಬ್ಬ ಹುಡುಗನು ಗುಂಡಿನ ಹೊಡೆತಕ್ಕೆ ಆಹುತಿಯಾದುದರ ಸಂದರ್ಭದಲ್ಲಿ ಮದರಾಸು ಹೈಕೋರ್ಟು ಜಡ್ಜಿ ಬಯರ್ಸ್‌ರು ದಸ್ತಗಿರಿಮಾಡಲ್ಪಟ್ಟ ಜಾವಿಯಾನಿನ ಮೇಲೆ ಬಿಡಲ್ಪಟ್ಟಿದಾರೆ. ಮ್ಯಾಜಿಸ್ಟ್ರೇಟರು ವಿಚಾರಣೆಯನ್ನು ಏಪ್ರಿಲ್ 23 ಕ್ಕೆ ಇಟ್ಟಿದ್ದಾರೆ.

ಮೃತ್ಯುಂತ ಸಂಗ್ರಹ

ನವದೆಹಲಿ ಮಾ 28— ಕೇಂದ್ರ ಅಸೆಂಬ್ಲಿಯಲ್ಲಿ ಲೀಗಿನ ಮೆಂಬರು ಕಾಂಗ್ರೆಸ್ಸಿನ ಮೇಲೆ ಇಲ್ಲಸಲ್ಲದ ಮಾತುಗಳನ್ನಾಡಿದರು. ಅಧ್ಯಕ್ಷರು ಸಮಾಧಾನ ಪಡಿಸಿದರು. ಮೆಂಬರು ತಮ್ಮ ಮಾತನ್ನು ವಾಪಸ್ ತೆಗೆದುಕೊಂಡರು.

ಂ ಂ

ವಾಷಿಂಗ್ಟನ್ ಮಾ 28— ಅಟಂ ಶಕ್ತಿಯಿಂದೊಡಗೂಡಿರುವ ಥೋರಿಯಂ ಎಂಬ ಲೋಹವು ಭಾರತದಲ್ಲಿ ಯಥೇಚ್ಛವಾಗಿದೆಯೆಂದೂ, ಇದರ ಮೇಲೆ ಅಂತರಾಷ್ಟ್ರೀಯ ಹತೋಟಿ ಇರಬೇಕೆಂದೂ ಅಮೇರಿಕಾದ ಒತ್ತಾಯ

ಂ ಂ

ಮದರಾಸು ಮಾ 26 — ಕೊಯಮತ್ತೂರು—ಕೊಡೈಕನಲ್ ರಸ್ತೆಯಲ್ಲಿ ಓಡಾಟವು ವಿಪರೀತವಾಗಿರುವುದರಿಂದ 20 ಲಕ್ಷ ರೂ. ಖರ್ಚಿನಿಂದ ಅಲ್ಲಿ ಸಿಮೆಂಟು ರಸ್ತೆ ತಯಾರಿಸಲು ಸರಕಾರದವರ ಯೋಚನೆಯಲ್ಲಿದೆ.

ಂ ಂ

ಮದರಾಸು ಮಾ 29— ಮದರಾಸು ಶಾಸನ ಸಭೆಯಲ್ಲಿ ಕಾಂಗ್ರೆಸ್ಸಿಗೆ 157 ಸ್ಥಾನಗಳು ದೊರೆತಿವೆ.

ಂ ಂ

ಜೋಹನ್ಸ್‌ಬರ್ಗ್ ಮಾ 26 — ಟ್ರಾನ್ಸ್‌ವಾಲಿನ ಹಿಂದೂಗಳು ಘೆಟೀ ಬಿಲ್ಲನ್ನು ಪ್ರತಿಭಟಿಸಲು ಹರತಾಳವನ್ನಾಚರಿಸಿದರು.

ವಾಷಿಂಗ್ಟನ್ ಮಾ 28— ಯು ಎಸ್. ಆರ್ ಆರ್ ಎ ಕಾನ್ಸಿಲ್ಲಿನವರು ಅಮೇರಿಕಾದಲ್ಲಿ ಮತ್ತೆ ರೇಷನಿಂಗ್ ಜಾರಿಗೆ ತರಬೇಕೆಂದು ಮಾಡಿದ ಸಲಹೆಯನ್ನು ಪೈ || ಟ್ರೂಮನ್ನರು ತಿರಸ್ಕರಿಸಿದಾರೆ.

ಂ ಂ

ಅಹಮದಾಬಾದು ಮಾ 28 — ನೈನಿ ಜೈಲಿನಲ್ಲಿ ಅನೇಕರು ಕೆಲ ರಾಜಕೀಯ ಖೈದಿಗಳೂ ಕೂಡ ನಡೆಸುತ್ತಿದ್ದ ಅನ್ನ ಮುಷ್ಕರವು ಮುಕ್ತಾಯ ಗೊಂಡಿರುವುದಾಗಿ ತಿಳಿದುಬಂದಿದೆ.

ಂ ಂ

ಮದರಾಸು ಮಾ 28 — ಸ್ಪೆನ್ಸರ್ ಕಂಪೆನಿಯ ಮ್ಯಾನೇಜರು ಡಾಕ್ಟರು ಸರ್ಟಿಫಿಕೇಟಿನೊಡನೆ ಒಂದು ಡಬ್ಬ ಗ್ಲಾಕ್ಸೋಗಾಗಿ ಒಂದಿದ್ದ ಒಬ್ಬಾತನಿಗೆ ಕೊಡಲು ನಿರಾಕರಿಸಿದ್ದಕ್ಕಾಗಿ 5 ಸಾವಿರ ರೂ. ಜುಲ್ಮಾನೆ ವಿಧಿಸಲಾಗಿದೆ.

ಂ ಂ

ವಾದರಾಸು ಮಾ 28— ಮಾಡಿದ ವ್ಯಾಪಾರಕ್ಕೆ ಕ್ಯಾಷ ಬಿಲ್ ಕೊಡಲು ನಿರಾಕರಿಸಿದ ಅಪರಾಧದ ಮೇಲೆ ಭೂಪತಿ ಮೊದಲಿಯಾರ್ ಎಂಬ ಎಲೆಕ್ಟ್ರಿಕ್ ಕಂಟ್ರಾಕ್ಟರಿಗೆ ರೂ. 1000 ಜುಲ್ಮಾನೆ ವಿಧಿಸಲಾಯಿತು.

ಂ ಂ

ನವದೆಹಲಿ ಮಾ 28— ಗಾಂಧೀಜಿಯವರು ಡೆಲ್ಲಿಗೆ ಏಪ್ರಿಲ್ 2 ಕ್ಕೆ ಬರುವರೆಂದೂ, ಅವರು ಹರಿಜನಕೇರಿಯಲ್ಲಿ ವಾಸಸ್ಥಾನ ಮಾಡಿಕೊಂಡು ಇರುವರೆಂದೂ ಹೇಳಲಾಗಿದೆ.

ಶ್ರೀ ಮಹಾವೀರರ ಜನ್ಮದಿನ

ಮೈಸೂರು ರಾಜಧಾನಿಯಲ್ಲಿನ ಎಲ್ಲಾ ಜೈನ ಮಹಾಜನಗಳೂ ಸೇರಿ ಏಪ್ರಿಲ್ 14 ನೇ ತಾರೀಖಿನ ದಿವಸ (ಚೈತ್ರ ಶ.ದ್ವ ತ್ರಯೋದಶಿ ಭಾನುವಾರ) ಶ್ರೀ ಮಹಾವೀರ ತೀರ್ಥಂಕರರ ಜನ್ಮದಿನವನ್ನು ಅತಿ ವಿಜೃಂಭಣೆಯಿಂದ ನಡೆಸಲು, ಆ ದಿವಸ ಪ್ರಾತಃಕಾಲ ಎಲ್ಲಾ ಜೈನ ದೇವಾಲಯಗಳಲ್ಲೂ ದೇವರಿಗೆ ಪೂಜಾದಿಗಳು ಬೆಳೆದನಂತರ, ಅರಮನೆಯ ಮರ್ಯಾದೆಗಳು ಮತ್ತು ಬಾಜಾಬಜಂತ್ರಿಗಳಿಂದ ಕೂಡಿ ಊರಿನ ಮುಖ್ಯ ರಾಜಬೀದಿಗಳಲ್ಲಿ ಬಹಳ ಮೈಭವದಿಂದ ಮೆರವಣಿಗೆಯನ್ನು ರಥದಲ್ಲಿ ಬೆಳೆಯಿಸುತ್ತಾರೆ. ಈ ವಿಚಾರದಲ್ಲಿ ಜೈನಮಂಡಲಿಯವರು ಭಕ್ತಿವಿಶ್ವಾಸಗಳಿಂದ ಕೆಲಸಮಾಡುತ್ತಿರುವುದು ಅಭಿನಂದನೀಯವಾಗಿರುತ್ತದೆ ಎಂದು ಬಿ. ಎಂ. ಖಾದರ್, ಗೋರಕ್ಷಣಾ ಪ್ರಚಾರಕ, ಬೆಳ್ಳೂರು ಇವರು ತಿಳಿಸಿರುತ್ತಾರೆ.

.....

ಪ್ರಚಾರೋಪನ್ಯಾಸ

ಮೈಸೂರು, ಮಾ 30 — ವಿಶ್ವವಿದ್ಯಾನಿಲಯ ಪ್ರಚಾರೋಪನ್ಯಾಸಗಳ ಆಶ್ರಯದಲ್ಲಿ ಹುಣಸೂರು ಮಿಡ್ಲ್ ಸ್ಕೂಲ್ ಹಾಲಿನಲ್ಲಿ ಶ್ರೀಮಾನ್ ಎಸ್. ರಾಮಚಂದ್ರರಾವ್, ಎಂ. ಎ. ರವರು ಮುಂದಿನ ತಿಂಗಳು 6 ರಲ್ಲಿ ' ಮೇಘ ದೂತ ' ಎಂಬ ವಿಷಯದಲ್ಲಿ ಉಪನ್ಯಾಸ ಮಾಡುವರು.

——

ತಿದ್ದುಪಡಿ

ಮೈಸೂರು, ತಾ 30 — ಇದೇ ತಾ || 28 ರಲ್ಲಿ ' ಸತ್ಯವಾದಿ ' ಪತ್ರಿಕೆಯ ಮೂರನೇ ಕಾಲಂನಲ್ಲಿ ಪ್ರಕಟವಾಗಿರುವ ' ಮರಿಮಲ್ಲಪ್ಪನವರ ಹೈಸ್ಕೂಲ್ ವಿದ್ಯಾರ್ಥಿ ಶ್ರೀನಿವಾಸ ' ಎಂಬುವರು ಡಿಬಾರ್ ಆಗಿರುವ ಸುದ್ದಿಯು ತಪ್ಪೆಂದೂ, ಪರೀಕ್ಷೆಯಿಂದ ಡಿಬಾರ್ ಆಗಿಲ್ಲವೆಂದು ಶ್ರೀ ಶ್ರೀನಿವಾಸರೇ ತಿಳಿಸಿರುವರು.

ನವದೆಹಲಿ ಮಾ 28— ಮಂತ್ರಿಮಂಡಲ ನಿಯೋಗದವರು ಗೌರ್ನರುಗಳೊಡನೆ ಅಯ್ಯಾಪ್ರಾಂತ್ಯಗಳ ಪರಿಸ್ಥಿತಿ ಬಗ್ಗೆ ಮಾತುಕತೆ ನಡೆಸಿದರು.

ಹಾಂಕಾಂಗ್ ಮಾ 28—ಇಲ್ಲಿ ಯುದ್ಧ ತಕ್ಸೀರುದಾರರ ಪ್ರಥಮ ವಿಚಾರಣೆಯು ಗಾರಂಭವಾಗಿದೆ. 18 ಮಂದಿ ಜಪಾನೀಯರು ಅಪಾದಿತರಾಗಿರುವರು.

At Ranjit ❁ From 31–3–46

RAJPUTANI

Ranjit's 101 st Picture

ಜಯಂಬಾಚ್ — ವೀಣಾ — ಬಿರ್ಜಿಗುಪ್ತ — ಗುಲಾಂಮಹಮದ್

ರಾ ಜ ಪು ತಾ ನಿ

30 ಮತ್ತು 31 ಬೆಳಗಿನ ಪ್ರದರ್ಶನ — ಉ ಜಾ ಲ

ಅಲ್ಪ ವ್ಯಯದ ಕಾಯಕಲ್ಪ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಶಕ್ತಿಸುಧಾ

ಬೆಲೆ ಡಬ್ಬಿಗೆ ರೂ. ೧.೮-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

SHAKTI SUDHA

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ವೀನುರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸಿದ ಇತರ ಅಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದವರಿ ನಂಬಿಕೆಯಿಟ್ಟು ಮಾಡುವುದಲ್ಲದೆ ಸದಾ ಅದನ್ನು ಉಪಯೋಗಿಸುವಂತೆ ಮಾಡಿಕೊಳ್ಳುವುದು. ಎಲ್ಲಾ ಪ್ರಸಿದ್ಧ ವ್ಯಾಪಾರಿಗಳಲ್ಲೂ ಒಂದು ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. ೫-೮-೦ ಮಾತ್ರ.

ನಮ್ಮ ಸುಘಂಧ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

At Opera — Morning Shows From 29–3–46

Ice Capades Revue

3 ನೇ ವಾರ

ಮೆಹತಾಬ್ — ಸುರೇಂದ್ರ

ಪಾತ್ರವಹಿಸಿರುವ

.... ವಿಶ್ವಾಸ್....

ಮುಂದಿನ ವಿಷೇಶ—

ಭಕ್ತ ಕಲಾತಿ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾಮಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು

For Good Printing

L. N. Press

Srirampet MYSORE

ಅರಸ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

Get Medical Diplomas

At home : — Ayurvedic Homeopathic, Unani, etc., Prospectus Free.

Old Indian Medical College Kotgarh, Simla

Edited, Printed and published by M. S. Krishna Rao, at the Satvavadi Press, Chamaraja Agrahar, Mysore